## ರಾಜ್ಯ ಒಕ್ಕಲಿಗರ ಸಂಘ

## ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ) ಶ್ರೀಗಂಧದಕಾವಲು, ಬೆಂಗಳೂರು

ಸಂಖ್ಯೆ:ರಾಒಸಂ/ಒಸಮಾಶಾ/ಸಿ&ಆರ್-19/2019-20

ಬೆಂಗಳೂರು,
ದಿನಾಂಕ: 20 ಮೇ, 2020.

### ಅಧಿಸೂಚನೆ

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ಕಲಂ-27(ಎ) ರನ್ವಯ ರಾಜ್ಯ ಒಕ್ಕಲಿಗರ ಸಂಘಕ್ಕೆ ಸರ್ಕಾರದಿಂದ ನೇಮಕಗೊಂಡಿರುವ ಆಡಳಿತಾಧಿಕಾರಿಯವರು ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ರೂಪಿಸಲು ಉದ್ದೇಶಿಸಿ,ಅಧಿಸೂಚನೆ ಸಂಖ್ಯೆ:ರಾಒಸಂ/ಒಸಮಾಶಾ/ಸಿ&ಆರ್-19/2019-20 ದಿನಾಂಕ:31.12.2019ರಲ್ಲಿ ಕರಡು ನಿಯಮಾವಳಿಗಳ ಪ್ರತಿಯನ್ನು ರಾಜ್ಯ ಒಕ್ಕಲಿಗರ ಸಂಘ ಹಾಗೂ ಸದರಿ ಸಂಸ್ಥೆಯ ನೋಟೀಸ್ ಬೋರ್ಡಿನಲ್ಲಿ ಮತ್ತು ಅಂತರ್ಜಾಲದಲ್ಲಿ ಪ್ರಕಟಿಸಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಅಧಿಸೂಚನೆ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿತ್ತು,

ಸದರಿ ಕರಡು ನಿಯಮಾವಳಿಗಳ ಪ್ರತಿಯನ್ನು ದಿನಾಂಕ:31.12..2019ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿತ್ತು;

ಮತ್ತು ಸದರಿ ಕರಡು ನಿಯಮಾವಳಿಗಳ ಬಗ್ಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳು/ಸಲಹೆಗಳನ್ನು ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ, ಇವರು ಪರಿಗಣಿಸಿರುತ್ತಾರೆ.

ಆದುದರಿಂದ, ಈಗ ಆಡಳಿತಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ, ಇವರು ಸಂಘದ ಬೈಲಾದಲ್ಲಿನ ನಿಬಂಧನೆ 8ರ ಉಪನಿಬಂಧನೆ (9)ರಡಿ ಪ್ರದತ್ತವಾದ ಅಧಿಕಾರದನ್ವಯ ಈ ಮೂಲಕ ಕೆಳಕಂಡ ನಿಯಮಗಳನ್ನು ರಚಿಸಿರುತ್ತಾರೆ:-

### ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:**

   (i) ಈ ನಿಯಮಾವಳಿಗಳನ್ನು ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), (ವೃಂದ ಮತ್ತು ನೇಮಕಾತಿ) ನಿಯಮಾವಳಿ, 2019 ಎಂದು ಕರೆಯತಕ್ಕದ್ದು.

   (ii) ಈ ನಿಯಮಾವಳಿಗಳು ರಾಜ್ಯ ಒಕ್ಕಲಿಗರ ಸಂಘದ ಕೇಂದ್ರ ಕಛೇರಿ ನೋಟೀಸ್ ಬೋರ್ಡಿನಲ್ಲಿ ಹಾಗೂ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯ ನೋಟೀಸ್ ಬೋರ್ಡಿನಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

2. **ಅನ್ವಯಿಕೆ:**

   (i) ಈ ನಿಯಮಾವಳಿಗಳು ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡ ಹಾಗೂ ವೇತನಾನುದಾನ ಪಡೆಯುತ್ತಿರುವ ಖಾಯಂ ನೌಕರರಿಗೆ ಮಾತ್ರ ಅನ್ವಯವಾಗುವುದು.

   (ii) ಈ ನಿಯಮಾವಳಿಗಳು ತಾತ್ಕಾಲಿಕವಾಗಿ ನೇಮಕಗೊಂಡ ನೌಕರರಿಗೆ ಅನ್ವಯಿಸುವುದಿಲ್ಲ.

**3. ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆ:**

(i) ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯ ವಿವಿಧ ಹುದ್ದೆಗಳು ಅನುಬಂಧಿಸಿದ ಷೆಡ್ಯೂಲ್-I ರ ಅಂಕಣ-2 ರಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು. ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಠ ವಿದ್ಯಾರ್ಹತೆಯು ಅನುಕ್ರಮವಾಗಿ ಅಂಕಣ-3, 4 ಮತ್ತು 5 ರಲ್ಲಿರುವಂತೆ ಇರತಕ್ಕದ್ದು.

(ii) ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು ಸಂಸ್ಥೆಯ ಹುದ್ದೆಗಳು ಅನುಬಂಧಿಸಿದ ಷೆಡ್ಯೂಲ್- I (ಎ) ರಲ್ಲಿ ನಿಗದಿಪಡಿಸಿದಂತೆ ಇರತಕ್ಕದ್ದು.

(iii) ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಸಿಬ್ಬಂದಿಯ ನೇಮಕಾತಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ವಯೋಮಿತಿ ಹಾಗೂ ನಿವೃತ್ತಿ ವಯಸ್ಸು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಸಂಬಂಧಪಟ್ಟ ವರ್ಗದ ಸಿಬ್ಬಂದಿಗೆ ಅನುಗುಣವಾಗಿ ನಿಗದಿಪಡಿಸಿರುವಂತೆ ಅನ್ವಯವಾಗತಕ್ಕದ್ದು.

(iv) ಷೆಡ್ಯೂಲ್-I ಮತ್ತು ಷೆಡ್ಯೂಲ್-I (ಎ)ರಲ್ಲಿ ಸೇರ್ಪಡೆಗೊಳ್ಳದಿರುವ ಹಾಗೂ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಹುದ್ದೆಗಳಲ್ಲಿ ಖಾಯಂ ಆಧಾರದ ಮೇಲೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಈಗಿನ ಪದನಾಮ ಮತ್ತು ಸೇವಾ ಷರತ್ತುಗಳೊಂದಿಗೆ ಅವರ ಪದಾವಧಿಯವರೆಗೆ ಮುಂದುವರೆಯತಕ್ಕದ್ದು. ತದನಂತರ ಅಂತಹ ಹುದ್ದೆಗಳು ರದ್ದುಗೊಳ್ಳುವುವು ಮತ್ತು ಷೆಡ್ಯೂಲ್-I ಮತ್ತು ಷೆಡ್ಯೂಲ್-I (ಎ)ರಲ್ಲಿ ನಮೂದಿಸಿರುವ ಹುದ್ದೆಗಳು ಮಾತ್ರ ಸಂಸ್ಥೆಯಲ್ಲಿ ಮುಂದುವರೆಯತಕ್ಕದ್ದು.

**4. ಪರಿಭಾಷೆ:**

ಈ ನಿಯಮಾವಳಿಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

1) "ಕಾಯಿದೆ" ಎಂದರೆ ಕರ್ನಾಟಕ ಶಿಕ್ಷಣ ಕಾಯಿದೆ 1983 (ಕರ್ನಾಟಕ ಆಕ್ಟ್ 1 ಆಫ್ 1995).
2) "ಸಂಘ" ಎಂದರೆ ರಾಜ್ಯ ಒಕ್ಕಲಿಗರ ಸಂಘ.
3) "ಪದಾಧಿಕಾರಿಗಳು" ಎಂದರೆ ಸಂಘದ ಬೈಲಾದ ನಿಬಂಧನೆ 7(1) (ಅ)ರ ಪ್ರಕಾರ ವ್ಯಾಖ್ಯಾನಿಸಿದ ಅಧ್ಯಕ್ಷರು ಹಾಗೂ ಇತರೆ ಪದಾಧಿಕಾರಿಗಳು ಒಳಗೊಂಡಂತೆ ಆಗಿರುತ್ತಾರೆ.
4) "ಕಾರ್ಯಕಾರಿ ಸಮಿತಿ' ಎಂದರೆ ಸಂಘದ ಬೈಲಾ ಪ್ರಕಾರ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿಗೆ ಸದಸ್ಯರಿಂದ ಚುನಾಯಿತಗೊಂಡ ವ್ಯಕ್ತಿ/ವ್ಯಕ್ತಿಗಳು ಆಗಿರುತ್ತಾರೆ.
5) "ಮ್ಯಾನೇಜ್‌ಮೆಂಟ್" ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.
6) "ಸಂಸ್ಥೆ" ಎಂದರೆ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದ್ದು ಭಾಗಶ: ಅಥವಾ ಪೂರ್ಣ ಅನುದಾನ ಪಡೆಯುತ್ತಿರುವ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು, ಬೆಂಗಳೂರು ಆಗಿರುತ್ತದೆ.
7) "ಆಡಳಿತಾಧಿಕಾರಿ" ಎಂದರೆ ರಾಜ್ಯ ಸರ್ಕಾರವು ರಾಜ್ಯ ಒಕ್ಕಲಿಗರ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರನ್ವಯ ನೇಮಿಸಿದ ಅಧಿಕಾರಿ ಆಗಿರುತ್ತಾರೆ.
8) "ಸಿ.ಇ.ಒ." ಎಂದರೆ ರಾಜ್ಯ ಒಕ್ಕಲಿಗರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ.
9) "ವರ್ಷ" ಎಂದರೆ ಸಂದರ್ಭವು ಅಗತ್ಯಪಡಿಸಿದಂತೆ ಶೈಕ್ಷಣಿಕ ವರ್ಷ ಅಥವಾ ಆರ್ಥಿಕ ವರ್ಷ ಆಗಿರುತ್ತದೆ.
10) "ಬೋಧಕ ಮತ್ತು ಬೋಧಕೇತರ ವೃಂದಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರ" ಎಂದರೆ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಕಾರಿ ಸಮಿತಿ ಆಗಿರುತ್ತದೆ.

11) ''ಖಾಯಂ ಸಿಬ್ಬಂದಿ'' ಎಂದರೆ ಮಂಜೂರಾದ/ ಅಸ್ತಿತ್ವದಲ್ಲಿರುವ (substantive) ಬೋಧಕ ಅಥವಾ ಇತರೆ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ಕ್ರಮಬದ್ಧವಾಗಿ ನೇಮಕಗೊಂಡಿರುವ ಹಾಗೂ ನೇಮಕಾತಿಯು ವೇತನಾನುದಾನ ಪಡೆಯುವ ಹುದ್ದೆಯೆಂದು ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ( ಪ್ರಾಥಮಿಕ ಶಿಕ್ಷಣ) ಇವರಿಂದ ಅನುಮೋದಿಸಲ್ಪಟ್ಟಿರುವ ಸಿಬ್ಬಂದಿ ಆಗಿರುತ್ತಾರೆ.

12) ''ತಾತ್ಕಾಲಿಕ ಸಿಬ್ಬಂದಿ'' ಎಂದರೆ ಮಂಜೂರಾದ ಹುದ್ದೆಗೆ ನೇಮಕಾತಿ ನಿಯಮಗಳನ್ವಯ ನೇಮಕಗೊಳ್ಳದೇ ತುರ್ತು ಅವಶ್ಯಕತೆಗನುಗುಣವಾಗಿ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ತಾತ್ಕಾಲಿಕವಾಗಿ ನೇಮಕಗೊಂಡ ಸಿಬ್ಬಂದಿಯಾಗಿರುತ್ತಾರೆ.

13) ''ಬ್ಯಾಂಕ್'' ಎಂದರೆ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಪ್ರಾಥಮಿಕ ಶಿಕ್ಷಣ) /ರಾಜ್ಯ ಒಕ್ಕಲಿಗರ ಸಂಘ ಇವರು ನಿಗದಿಪಡಿಸಿರುವ ಯಾವುದೇ ವಾಣಿಜ್ಯ/ ಸಹಕಾರಿ ಬ್ಯಾಂಕ್ ಆಗಿರುತ್ತದೆ.

14) ''ಇಲಾಖಾ ಮುಖ್ಯಸ್ಥರು'' ಎಂದರೆ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಪ್ರಾಥಮಿಕ ಶಿಕ್ಷಣ), ಬೆಂಗಳೂರು ಆಗಿರುತ್ತಾರೆ.

15) '' ನಿಯಂತ್ರಣ ಪ್ರಾಧಿಕಾರ''/ ''ಸಕ್ಷಮ ಪ್ರಾಧಿಕಾರ'' ಎಂದರೆ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ), ಬೆಂಗಳೂರು ಆಗಿರುತ್ತಾರೆ.

16) ''ಸಂಸ್ಥೆಯಲ್ಲಿನ ಹುದ್ದೆಗಳು'' ಎಂದರೆ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಮತ್ತು ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ಅನುಕ್ರಮವಾಗಿ ಈ ನಿಯಮಾವಳಿಯ ಷೆಡ್ಯೂಲ್–1 ಮತ್ತು ಷೆಡ್ಯೂಲ್–1 (ಎ) ರಲ್ಲಿ ನಿರ್ಧಿಷ್ಠಪಡಿಸಿದ ಹುದ್ದೆಗಳು.

17) ''ಆಯ್ಕೆ ಮಂಡಳಿ (Board of Selection)'' ಎಂದರೆ ಈ ನಿಯಮಾವಳಿಗಳಲ್ಲಿ ನಿಗದಿಪಡಿಸಿದ ಆಯ್ಕೆ ಮಂಡಳಿ.

18) ''ರಾಜ್ಯ'' ಎಂದರೆ ಕರ್ನಾಟಕ ರಾಜ್ಯ.

ಈ ನಿಯಮಾವಳಿಗಳಲ್ಲಿ ನಿರ್ಧಿಷ್ಠವಾಗಿ ವ್ಯಾಖ್ಯಾನಿಸದಿರುವ ಇತರೆ ಪರಿಭಾಷೆಗಳು ಕರ್ನಾಟಕ ಶಿಕ್ಷಣ ಕಾಯಿದೆ, 1983 ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ನಿಯಮ ಮತ್ತು ಷರತ್ತುಗಳು) ನಿಯಮಗಳು 1999 ರಲ್ಲಿನ ಮಾರ್ಗಸೂಚಿಗಳಂತೆ ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು ಹಾಗೂ ಅವುಗಳನ್ನು ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗೆ ಅನ್ವಯವಾಗುವಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುವುದು.

**5. <u>ಸಿಬ್ಬಂದಿ ನೇಮಕಾತಿ:</u>**

(i) ಖಾಯಂ ಅಥವಾ ತಾತ್ಕಾಲಿಕ ಹುದ್ದೆಗಳನ್ನು ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರ ಪ್ರಸ್ತಾವನೆ ಮೇರೆಗೆ ಹಾಗೂ ನೇಮಕಾತಿಯ ಅವಶ್ಯಕತೆಗನುಗುಣವಾಗಿ ಕಾರ್ಯಕಾರಿ ಸಮಿತಿಯು ಈ ನಿಯಮಾವಳಿಗಳನ್ವಯ ಮಾತ್ರ ಹಾಗೂ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆ ಪಡೆದು ನೇಮಿಸಿಕೊಳ್ಳತಕ್ಕದ್ದು.

(ii) ಇನ್ನು ಮುಂದೆ ಮಂಜೂರಾದ/ಹೆಚ್ಚುವರಿಯಾಗಿ/ಹೊಸದಾಗಿ ಸೃಜಿಸಿದ ಹುದ್ದೆಗಳಿಗೆ ಮಾಡಲಾಗುವ ಯಾವುದೇ ಹೊಸ ನೇಮಕಾತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ವೇತನಾನುದಾನ (Grant-in-aid) ಪಡೆಯುವ ಹುದ್ದೆಗಳೆಂದು ಮಾತ್ರ ತುಂಬತಕ್ಕದ್ದು.

6. **ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪ್ರವೇಶಾತಿ:**

(i) ಕರ್ನಾಟಕ ಶಿಕ್ಷಣ ಕಾಯಿದೆ, 1983 ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ನಿಯಮಗಳು ಮತ್ತು ಷರತ್ತುಗಳು) ನಿಯಮಗಳು 1999 ರಲ್ಲಿ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಸ್ಥಳೀಯ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮ್ಯಾನೇಜ್‌ಮೆಂಟ್‌ಗಳಿಗೆ ಸಿಬ್ಬಂದಿ ನೇಮಕಾತಿಗೆ ಹಾಗೂ ಇತರೆ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದಲ್ಲದೆ ಕರ್ನಾಟಕ ಸಾಮಾನ್ಯ ಸೇವೆಗಳು( (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು 2006 ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ಸಿಬ್ಬಂದಿ ಮಾದರಿ ಮತ್ತು ಬೋಧಕ ಸಿಬ್ಬಂದಿಗೆ ಕನಿಷ್ಠ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನವನ್ನು ನಿಗದಿಪಡಿಸಲಾಗಿದೆ.

(ii) ಈ ನಿಯಮಗಳಲ್ಲಿ, ವಿಭಾಗಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆ ಆಧಾರದ ಮೇಲೆ ಪ್ರಾಥಮಿಕ ಶಾಲೆಗಳಲ್ಲಿನ ಸಿಬ್ಬಂದಿ ಮಾದರಿಯನ್ನು ನಿಗದಿಪಡಿಸಲಾಗಿದೆ. ಪ್ರತಿ ವಿಭಾಗದಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯು ಕನಿಷ್ಠ 40 ಮತ್ತು ಗರಿಷ್ಠ 80 ಆಗಿರತಕ್ಕದ್ದು. 40 ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯ ಒಂದು ವಿಭಾಗಕ್ಕೆ ಒಬ್ಬ ಶಿಕ್ಷಕರನ್ನು ನೇಮಕ ಮಾಡತಕ್ಕದ್ದಾಗಿದೆ. 1 ರಿಂದ 4ನೇ ತರಗತಿ ಅಥವಾ 5 ರಿಂದ 7ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ವಿಭಾಗದಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯು 40 ಕ್ಕಿಂತ ಕಡಿಮೆಯಿದ್ದಲ್ಲಿ, ಪ್ರತಿ ವಿಭಾಗದಲ್ಲಿನ ವಿದ್ಯಾರ್ಥಿ ಹಾಜರಾತಿ ಸಂಖ್ಯೆಯನ್ನು ಪರಿಗಣಿಸದೆ ಶಾಲೆಯಲ್ಲಿನ ಒಟ್ಟು ವಿದ್ಯಾರ್ಥಿ ಹಾಜರಾತಿ ಸಂಖ್ಯೆ 80 ನ್ನು ಪರಿಗಣಿಸಿ ಗರಿಷ್ಠ ಇಬ್ಬರು ಶಿಕ್ಷಕರನ್ನು ನೇಮಕ ಮಾಡತಕ್ಕದ್ದಾಗಿದೆ. ಇದೇ ರೀತಿ 1 ರಿಂದ 7ನೇ ತರಗತಿಗಳನ್ನು ಹೊಂದಿರುವ ಪ್ರಾಥಮಿಕ ಶಾಲೆಯಲ್ಲಿ ಪ್ರತಿ ವಿಭಾಗದಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆಯು 40 ಕ್ಕಿಂತ ಕಡಿಮೆಯಿದ್ದಲ್ಲಿ, ಪ್ರತಿ ವಿಭಾಗದಲ್ಲಿನ ವಿದ್ಯಾರ್ಥಿ ಹಾಜರಾತಿ ಸಂಖ್ಯೆಯನ್ನು ಪರಿಗಣಿಸದೆ ಶಾಲೆಯಲ್ಲಿನ ಒಟ್ಟು ವಿದ್ಯಾರ್ಥಿ ಹಾಜರಾತಿ ಸಂಖ್ಯೆ 160 ನ್ನು ಪರಿಗಣಿಸಿ ಗರಿಷ್ಠ ನಾಲ್ಕು ಶಿಕ್ಷಕರನ್ನು ನೇಮಕ ಮಾಡತಕ್ಕದ್ದಾಗಿದೆ.

(iii) ಈ ನಿಯಮಗಳು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ) ಹಾಗೂ ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಆದುದರಿಂದ, ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ) ಹಾಗೂ ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಗಳಲ್ಲಿ ಇರುವ ವಿದ್ಯಾರ್ಥಿಗಳ ಹಾಜರಾತಿ ಸಂಖ್ಯೆ ಹಾಗೂ ವಿಭಾಗಗಳ ಸಂಖ್ಯೆಯನ್ನು ಪರಿಗಣಿಸಿ ಬೋಧಕ ಸಿಬ್ಬಂದಿಯನ್ನು ನಿಗದಿಪಡಿಸಿ ಷೆಡ್ಯೂಲ್-I ಮತ್ತು ಷೆಡ್ಯೂಲ್-I (ಎ) ರಲ್ಲಿ ಅಳವಡಿಸಿದೆ.

(iv) ರಾಜ್ಯ ಒಕ್ಕಲಿಗರ ಸಂಘದ ವತಿಯಿಂದ ಶ್ರೀಗಂಧದಕಾವಲಿನಲ್ಲಿ 1 ರಿಂದ 7ನೇ ತರಗತಿವರೆಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ನಡೆಸಲಾಗುತ್ತಿದೆ. ಮಾಧ್ಯಮಿಕ ಶಾಲೆ (5 ರಿಂದ 7ನೇ ತರಗತಿ) ಮಾತ್ರ ಸರ್ಕಾರದ ಅನುದಾನಕ್ಕೆ ಒಳಪಟ್ಟಿದ್ದು, ಪ್ರಾಥಮಿಕ ಶಾಲೆ(1 ರಿಂದ 4ನೇ ತರಗತಿ) ಅನುದಾನರಹಿತವಾಗಿರುತ್ತದೆ. ಆದುದರಿಂದ, ಪ್ರಾಥಮಿಕ ಶಾಲೆಗೂ ಸಹ ಸರ್ಕಾರದಿಂದ ಅನುದಾನ ಪಡೆಯಲು ಸಂಘದ ಆಡಳಿತ ಮಂಡಳಿಯು ಜರೂರು ಕ್ರಮ ಕೈಗೊಳ್ಳುವುದು.

7. **ಕಾರ್ಯಭಾರ:**

ಪೂರ್ಣಕಾಲಿಕ ಬೋಧಕ ಸಿಬ್ಬಂದಿಗೆ ಬೋಧನಾ ಅವಧಿಯು ಈ ಕೆಳಕಂಡಂತೆ ಇರತಕ್ಕದ್ದು.

| ಬೋಧಕ ಸಿಬ್ಬಂದಿ | ಬೋಧನಾ ಅವಧಿ –/ವಾರಕ್ಕೆ (45 ನಿಮಿಷಗಳ ಅವಧಿಯ ಪೀರಿಯಡ್) |
|---|---|
| ಮುಖ್ಯ ಶಿಕ್ಷಕರು | 40 |
| ಸಹ ಶಿಕ್ಷಕರು | 40 |

**8. ನೇರ ನೇಮಕಾತಿ:**

(i) ನೇಮಕಾತಿ ಪ್ರಾಧಿಕಾರವು ಯಾವುದೇ ಖಾಲಿ ಹುದ್ದೆಗಳನ್ನು ತುಂಬುವ ಅವಶ್ಯಕತೆ ಕಂಡುಬಂದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಖಾಲಿ ಹುದ್ದೆಗಳ ವಿವರ, ಹುದ್ದೆಗಳ ಸಂಖ್ಯೆ, ಅರ್ಹತಾ ಷರತ್ತುಗಳು ಮತ್ತು ನೇಮಕಾತಿ ವಿಧಾನ ಇತ್ಯಾದಿಗಳನ್ನು ನಮೂದಿಸಿ ರಾಜ್ಯದ ಪ್ರಮುಖ ಕನ್ನಡ ಹಾಗೂ ಇಂಗ್ಲೀಷ್ ವೃತ್ತ ಪತ್ರಿಕೆಗಳಲ್ಲಿ ಹಾಗೂ ಸೂಕ್ತವೆನಿಸುವ ಇತರೆ ಮಾಧ್ಯಮದಲ್ಲಿ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲು ಕ್ರಮಕೈಗೊಳ್ಳತಕ್ಕದ್ದು. ಪತ್ರಿಕಾ ಪ್ರಕಟಣೆಯ ಪ್ರತಿಗಳನ್ನು ಸಂಬಂಧಪಟ್ಟ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸತಕ್ಕದ್ದು.

(ii) ಷೆಡ್ಯೂಲ್–I ಮತ್ತು ಷೆಡ್ಯೂಲ್–I(ಎ)ರಲ್ಲಿ ನಿಗದಿಪಡಿಸಿದ ಹುದ್ದೆಗಳ ಮಿತಿಯನ್ನು ಮೀರಿ ಯಾವುದೇ ನೇಮಕಾತಿಗಳನ್ನು ಮಾಡಿಕೊಳ್ಳುವಂತಿಲ್ಲ.

(iii) ನೇಮಕಾತಿಯ ಸಂಪೂರ್ಣ ಪ್ರಕ್ರಿಯೆಯು ಸಹಾಯಾನುದಾನ ನಿಯಮಾವಳಿಗಳಿಗೆ ಅನುಗುಣವಾಗಿರಬೇಕು ಮತ್ತು ನೇಮಕಾತಿ ಮಾಡಲಾಗುವ ಹುದ್ದೆ/ಹುದ್ದೆಗಳಿಗೆ ಸಂಸ್ಥೆಯು ಸಕ್ಷಮ ಪ್ರಾಧಿಕಾರದಿಂದ ಸಹಾಯಾನುದಾನ ಪಡೆಯಲು ಅನುಮಾಗುವಂತೆ ಇರತಕ್ಕದ್ದು.

(iv) ಷೆಡ್ಯೂಲ್–I ರಲ್ಲಿ ನಮೂದಿಸಿರುವ ಯಾವುದಾದರೂ ಹುದ್ದೆ ಅನುದಾನ ರಹಿತವಾಗಿದ್ದಲ್ಲಿ, ಆ ಹುದ್ದೆಯು ಅನುದಾನಕ್ಕೆ ಅರ್ಹತೆ ಪಡೆಯುವ ಷರತ್ತುಗಳನ್ನು ಪೂರೈಸುವವರೆಗೆ ಆ ರೀತಿ ಮುಂದುವರಿಯತಕ್ಕದ್ದು. ಆ ಹುದ್ದೆ/ಹುದ್ದೆಗಳಲ್ಲಿ ಸ್ಥಾನಪನ್ನರಾಗಿರುವವರಿಗೆ ಆಡಳಿತ ಮಂಡಳಿಯು ತನ್ನ ಸ್ವಂತ ಸಂಪನ್ಮೂಲದಿಂದ ವೇತನ ಮತ್ತು ಭತ್ಯೆಗಳನ್ನು ಭರಿಸತಕ್ಕದ್ದು. ಆಡಳಿತ ಮಂಡಳಿಯು ಅಂತಹ ಹುದ್ದೆಗಳಿಗೆ ಅನುದಾನ ಪಡೆಯಲು ಅವಶ್ಯಕ ಜರೂರು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**9. ಆಯ್ಕೆ ಮಂಡಳಿ:**

ನೇಮಕಾತಿ ಪ್ರಾಧಿಕಾರವು ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಕೆಳಕಂಡ ಆಯ್ಕೆ ಮಂಡಳಿಯನ್ನು ನಿಗದಿಪಡಿಸಲಾಗಿದೆ:–

**(ಅ) ಬೋಧಕ ಸಿಬ್ಬಂದಿಗೆ ಆಯ್ಕೆ ಮಂಡಳಿ:**

| | | |
|---|---|---|
| (ಅ) | ಅಧ್ಯಕ್ಷರು, ರಾಜ್ಯ ಒಕ್ಕಲಿಗರ ಸಂಘ. | ಅಧ್ಯಕ್ಷರು |
| (ಆ) | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಇವರಿಂದ ನಾಮನಿರ್ದೇಶಿಸಲ್ಪಟ್ಟ ಸರ್ಕಾರಿ ಮಾಧ್ಯಮಿಕ ಶಾಲೆಯ ವಿಷಯ ಪರಿಣಿತರು. | ಸದಸ್ಯರು |
| (ಇ) | ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ) ಇವರಿಂದ ನಾಮನಿರ್ದೇಶಿಸಲ್ಪಟ್ಟ ರಾಜ್ಯದ ಯಾವುದೇ ಖಾಸಗಿ /ಅನುದಾನಿತ ಮಾಧ್ಯಮಿಕ ಶಾಲೆಯ ವಿಷಯ ಪರಿಣಿತರು. | ಸದಸ್ಯರು |
| (ಈ) | ಸಮಾಜ ಕಲ್ಯಾಣ ಇಲಾಖೆ/ ಹಿಂದುಳಿದ ವರ್ಗಗಳ ಇಲಾಖೆಗಳ ಪ್ರತಿನಿಧಿಗಳು. | ಸದಸ್ಯರುಗಳು |
| (ಉ) | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ರಾಜ್ಯ ಒಕ್ಕಲಿಗರ ಸಂಘ. | ಸದಸ್ಯರು |
| (ಊ) | ಮುಖ್ಯೋಪಾಧ್ಯಾಯರು, ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು. | ಸದಸ್ಯ–ಕಾರ್ಯದರ್ಶಿ |

**ಕೋರಂ:** ಆಯ್ಕೆ ಮಂಡಳಿ ಸಭೆಗೆ ಮೇಲಿನಂತಿರುವ ಸದಸ್ಯರಲ್ಲಿ ಕನಿಷ್ಠ 4 ಸದಸ್ಯರು ಹಾಜರಿರತಕ್ಕದ್ದು. ಅವರುಗಳಲ್ಲಿ ಒಬ್ಬರು (ಈ) ರಲ್ಲಿನ ಹಾಗೂ ಮತ್ತೊಬ್ಬರು (ಆ) ಅಥವಾ (ಇ) ರಲ್ಲಿನ ಸದಸ್ಯರು ಆಗಿರತಕ್ಕದ್ದು.

**10. ಅರ್ಹ ಅಭ್ಯರ್ಥಿಗಳ ಆಯ್ಕೆ:**

(i) ಆಯ್ಕೆ ಮಂಡಳಿಯು ನಿಗದಿಪಡಿಸಿದ ಆಯ್ಕೆ ವಿಧಾನವನ್ನು ಅಳವಡಿಸಿಕೊಂಡು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅಂತಿಮ ಆಯ್ಕೆ ಪಟ್ಟಿಯನ್ನು ತಯಾರಿಸಿ ನೇಮಕಾತಿ ಪ್ರಾಧಿಕಾರಕ್ಕೆ ಕಳುಹಿಸುವುದು.

(ii) ಆಯ್ಕೆ ವಿಧಾನವು ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಉತ್ತಮ ಅಭ್ಯರ್ಥಿ ಆಯ್ಕೆಗೊಳ್ಳುವಂತೆ ಇರತಕ್ಕದ್ದು ಮತ್ತು ಬೋಧನಾ ಸಿಬ್ಬಂದಿ ಆಯ್ಕೆಗೆ **ಅಪೆಂಡಿಕ್ಸ್–ಎ** ರಲ್ಲಿ ನಿಗದಿಪಡಿಸಿರುವ ಮಾನದಂಡಗಳು ಹಾಗೂ ಕಾರ್ಯವಿಧಾನವನ್ನು ಒಳಗೊಂಡಿರತಕ್ಕದ್ದು.

**11. ಅಭ್ಯರ್ಥಿಗಳ ನೇಮಕಾತಿ:**

(i) ಆಯ್ಕೆ ಮಂಡಳಿಯು ಕಳುಹಿಸಿದ ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳ ನೇಮಕಾತಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಾಗೂ ಸಂಬಂಧಪಟ್ಟ ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಎಲ್ಲಾ ಅಭ್ಯರ್ಥಿಗಳಿಗೆ ಅವಶ್ಯವಿರುವ ವೈದ್ಯಕೀಯ ತಪಾಸಣೆ ಮತ್ತು ಶೈಕ್ಷಣಿಕ ದಾಖಲೆಗಳ ಪರಿಶೀಲನೆ ನಂತರ ಕಾರ್ಯಕಾರಿ ಸಮಿತಿಯು ನೇಮಕಾತಿ ಮಾಡಿಕೊಳ್ಳತಕ್ಕದ್ದು.

(ii) ನೇಮಕಾತಿ ಆದೇಶ ಹೊರಡಿಸಿದ ನಂತರ ನೇಮಕಾತಿಗೊಂಡ ಅಭ್ಯರ್ಥಿಯು ನಿಗದಿತ ಕಾಲಾವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅವನ/ಅವಳ ನೇಮಕಾತಿಯು ರದ್ದುಗೊಳ್ಳುತ್ತದೆ. ಖಾಲಿಯಿರುವ ಹುದ್ದೆಗೆ ಮೆರಿಟ್‌ನಲ್ಲಿ ನಂತರದ ಸ್ಥಾನದಲ್ಲಿರುವ ಅಭ್ಯರ್ಥಿಯನ್ನು ನೇಮಿಸಿಕೊಳ್ಳತಕ್ಕದ್ದು. ಎರಡನೇ ಅಭ್ಯರ್ಥಿಯೂ ಸಹ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಅಂತಹ ಹುದ್ದೆಯನ್ನು ಖಾಲಿ ಹುದ್ದೆ ಎಂದು ಪರಿಗಣಿಸಿ ಹೊಸದಾಗಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು.

**12. ಪರಿವೀಕ್ಷಣಾ ಅವಧಿ:**

(i) ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ) ಮತ್ತು ಒಕ್ಕಲಿಗರ ಸಂಘ ಪ್ರಾಥಮಿಕ ಶಾಲೆ (ಅನುದಾನರಹಿತ), ಶ್ರೀಗಂಧದಕಾವಲು, ಬೆಂಗಳೂರು, ಸಂಸ್ಥೆಯ ಸೇವೆಗೆ ನಿಯಮಾನುಸಾರ ನೇಮಕಗೊಂಡ ಎಲ್ಲಾ ಸಿಬ್ಬಂದಿಗೆ ಎರಡು ವರ್ಷಗಳ ಪರಿವೀಕ್ಷಣಾ ಅವಧಿ ಇರುತ್ತದೆ.

(ii) ನೇಮಕಾತಿ ಪ್ರಾಧಿಕಾರವು ಕಾರಣಗಳನ್ನು ಲಿಖಿತ ರೂಪದಲ್ಲಿ ದಾಖಲಿಸಿ ಪರಿವೀಕ್ಷಣಾ ಅವಧಿಯನ್ನು ಅವಶ್ಯಕವೆನಿಸಿದ ಅವಧಿಯವರೆಗೆ ವಿಸ್ತರಿಸಬಹುದು.

(iii) ನೇಮಕಾತಿ ಪ್ರಾಧಿಕಾರವು ಎರಡು ವರ್ಷಗಳ ಅಥವಾ ವಿಸ್ತರಿಸಿದ ಪರಿವೀಕ್ಷಣಾ ಅವಧಿಯು ಮುಕ್ತಾಯಗೊಂಡ ನಂತರ, ಪರೀಕ್ಷಾರ್ಥಿ ಅಭ್ಯರ್ಥಿಯ ಕಾರ್ಯನಿರ್ವಹಣೆ ಆಧರಿಸಿ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ್ದಾರೆ ಎಂದು ಘೋಷಿಸತಕ್ಕದ್ದು.

(iv) ಅತೃಪ್ತಿಕರ ಕಾರ್ಯನಿರ್ವಹಣೆಗಾಗಿ ಅಥವಾ ಪರಿವೀಕ್ಷಣಾ ಅವಧಿಯಲ್ಲಿನ ಇತರೆ ಯಾವುದೇ ದುರ್ನಡತೆಗಾಗಿ ಯಾವ ಅಭ್ಯರ್ಥಿಯ ಪರಿವೀಕ್ಷಣಾ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆಂದು ಘೋಷಿಸಲ್ಪಡುವುದಿಲ್ಲವೋ ಅಂತಹವರನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಯಾವುದೇ ಪೂರ್ವಭಾವಿ ನೋಟೀಸ್ ನೀಡದೆ ಸೇವೆಯಿಂದ ವಜಾಗೊಳಿಸಬಹುದಾಗಿದೆ.

**13. ಮುಂಬಡ್ತಿ:**

(i) ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಪ್ರಕಾರ ಮಂಜೂರಾದ ವೃಂದಬಲದಲ್ಲಿ ಬಡ್ತಿ ಕೋಟಾದಡಿ ಹುದ್ದೆ ಖಾಲಿ ಇದ್ದಾಗ ಮತ್ತು ಆ ಹುದ್ದೆಯನ್ನು ಭರ್ತಿ ಮಾಡುವುದು ಅವಶ್ಯಕವೆನಿಸಿದಾಗ ನೇಮಕಾತಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅರ್ಹ ನೌಕರರಿಗೆ ಬಡ್ತಿ ನೀಡುವುದನ್ನು ಪರಿಗಣಿಸತಕ್ಕದ್ದು.

(ii) ಮುಂಬಡ್ತಿ ನೀಡಲು ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ಪ್ರಾಥಮಿಕ ಶಿಕ್ಷಣ)/ ರಾಜ್ಯ ಸರ್ಕಾರ ನಿಗದಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

**14. ಜೇಷ್ಠತೆ:**

(ಅ) ಸಂಸ್ಥೆಯ ಆಡಳಿತ ಮಂಡಳಿಯು ಸಂಸ್ಥೆಯಲ್ಲಿನ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತಿ ವರ್ಷವೂ ಜನವರಿ ಒಂದನೇ ದಿನಾಂಕದಲ್ಲಿರುವಂತೆ ಜೇಷ್ಠತಾ ಪಟ್ಟಿ ತಯಾರಿಸಿ ಪ್ರಕಟಪಡಿಸತಕ್ಕದ್ದು.

(ಆ) ಜೇಷ್ಠತಾ ಪಟ್ಟಿ ತಯಾರಿಕೆಗೆ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957 ರಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು.

**15. ಇತರೆ ನಿಯಮಗಳ ಅನ್ವಯಿಕೆ:**

ಸಿಬ್ಬಂದಿ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1958 ಮತ್ತು ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ 1978 (ಕರ್ನಾಟಕ ಆಕ್ಟ್ 14 ಆಫ್ 1990) ರ ಮೇರೆಗೆ ರಚಿಸಿರುವ ಇತರೆ ಎಲ್ಲಾ ನಿಯಮಗಳು ಕಾಲಕಾಲಕ್ಕೆ ಆಗುವ ತಿದ್ದುಪಡಿಗಳೊಂದಿಗೆ ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಬೆಂಗಳೂರು ಸಂಸ್ಥೆಯಲ್ಲಿ ವೇತನಾನುದಾನ ಪಡೆಯುವ ಸಿಬ್ಬಂದಿಗೆ ಮಾತ್ರ ಅನ್ವಯವಾಗುತ್ತದೆ.

**16. ವ್ಯಾಖ್ಯಾನ:**

ಈ ನಿಯಮಾವಳಿಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ತೊಂದರೆ/ಗೊಂದಲ ಕಂಡುಬಂದಲ್ಲಿ, ಕಾರ್ಯಕಾರಿ ಸಮಿತಿಯು ಅಂತಹ ಉಪಬಂಧಗಳನ್ನು ಸಕ್ಷಮ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ವ್ಯಾಖ್ಯಾನಿಸತಕ್ಕದ್ದು ಮತ್ತು ಈ ಬಗ್ಗೆ ಸಕ್ಷಮ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಸಿದ್ದಯ್ಯ)**
**ಮುಖ್ಯ ಕಾರ್ಯನಿರ್ವಹಣಾಧಿಕಾರಿ,**
**ರಾಜ್ಯ ಒಕ್ಕಲಿಗರ ಸಂಘ.**

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.

3. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ(ಪ್ರಾಥಮಿಕ ಶಿಕ್ಷಣ), ಬೆಂಗಳೂರು.
5. ಆಡಳಿತಾಧಿಕಾರಿಗಳು, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
6. ಮುಖ್ಯೋಪಾಧ್ಯಾಯರು, ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಹೊರವರ್ತುಲ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–560 090.
7. ನೋಟೀಸ್ ಬೋರ್ಡ್, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
8. ನೋಟೀಸ್ ಬೋರ್ಡ್, ಒಕ್ಕಲಿಗರ ಸಂಘ ಮಾಧ್ಯಮಿಕ ಶಾಲೆ (ಅನುದಾನಿತ), ಶ್ರೀಗಂಧದಕಾವಲು, ಹೊರವರ್ತುಲ ರಸ್ತೆ, ವಿಶ್ವನೀಡಂ ಅಂಚೆ, ಬೆಂಗಳೂರು–560 090.
9. ಕಛೇರಿ ಕಡತ/ಬಿಡಿ ಪ್ರತಿಗಳು.